ರಾಜಕೀಯದ ನಡೆ ಅವರ ಜಮೀನುದಾರಿಕೆಯನ್ನು ಮುಂದುವರೆಸಿದಂತಿತ್ತು. ಈ ಸೀಮೆಯ ಹಲವು ಗ್ರಾಮಗಳಲ್ಲಿ ಅವರ ಆಸ್ತಿ ಹಂಚಿ ಹೋಗಿತ್ತೆನ್ನುವುದು ಎಲ್ಲರಿಗೂ ತಿಳಿದ ವಿಷಯವೇ. ಸತೀಶ, ಅನೀಶ ಇಬ್ಬರೇ ಮಕ್ಕಳು. ಇಡೀ ಆಸ್ತಿಗೆ ವಾರಸುದಾರರು ಎಂದಿತ್ತು, 'ಅವನು' ಬರುವವರೆಗೆ.

ಹಾದರಕ್ಕೆ ಹುಟ್ಟಿದವನು ಎಂದರೆ ತನ್ನಪ್ಪನೂ ಹಾದರ ಮಾಡಿದವರು ಎಂದಾಗಿಬಿಡುತ್ತದಲ್ಲ ಎಂಬ ಅರಿವಿನಿಂದಲೋ ಏನೋ ಅನೀಶ ಮತ್ತೆ ಆ ಮಾತನ್ನು ಆಡಲೇ ಇಲ್ಲ. ಆದರೂ ಅವನು ಹೇಗಿದ್ದಾನೆಂಬ ಕುತೂಹಲವಂತೂ ಇದ್ದೇ ಇತ್ತು. ತಾನು ಮತ್ತು ಅಣ್ಣ ಸತೀಶ ಒಬ್ಬರಂತೊಬ್ಬರಿಲ್ಲ. ಸತೀಶ ಹೆಚ್ಚಾಗಿ ಅಪ್ಪನನ್ನೇ ಹೋಲುತ್ತಾನೆ. ಅದೇ ರೀತಿ ಎತ್ತರ, ಎಣ್ಣೆಗಪ್ಪು ಬಣ್ಣ, ಗತ್ತು ಎಲ್ಲವೂ. ಅನೀಶನೋ ಅಮ್ಮನ ಪಡಿಯಚ್ಚು. ಬೆಳ್ಳಗೆ, ತೆಳ್ಳಗೆ, ವ್ಯವಹಾರಕ್ಕಿಂತಲೂ ಓದಿಗೆ ಮಣಿದವ. 'ಅವನು' ಹೇಗಿರಬಹುದು?

"ಇಲ್ಲೀವರೆಗೂ ಬರಕ್ಕೆ ಬಿಡಬಾರದಿತ್ತು." ಅನೀಶನ ಮಾತಿನಲ್ಲಿ ಇನ್ನೂ ಅಸಹನೆ ಇತ್ತು. ಇಲ್ಲೇ ಇದ್ದರು ಅಪ್ಪನ ಆಸ್ತಿಯನ್ನ ನೋಡಿಕೊಳ್ಳುವ ಅಣ್ಣನ ಬಗ್ಗೆ ಅಸಹನೆಯೋ, ಅಣ್ಣನ ಬೇಜವಾಬ್ದಾರಿತನದಿಂದ ತನ್ನ ಪಾಲಿನ ಆಸ್ತಿಗೂ ಸಂಚಕಾರ ಬಂದಿದ್ದರಿಂದಲೋ ತುಸು ಚುರುಕ್ಕೆನ್ನುವಂತೆಯೇ ಇತ್ತು ಮಾತು. ತಮ್ಮನಷ್ಟು ಓದಿಲ್ಲದ್ದರಿಂದ ಅಪ್ಪ ಕೂಡಿಟ್ಟ ಆಸ್ತಿಯನ್ನೆ ಸತೀಶ ತಬ್ಬಿಕೊಂಡಿದ್ದ. ಅನೀಶನಂತೆ ಓದಿನಲ್ಲೂ ಚುರುಕಾಗಿದ್ದಿದ್ದರೆ ಬಹುಶಃ ಅವನೂ ಈ ಹೊತ್ತಿಗೆ ವಿದೇಶದಲ್ಲಿರುತ್ತಿದ್ದ. ಈ ಎಲ್ಲ ರಗಳೆ ದೂರವೇ ಇರುತ್ತಿತ್ತು.

"ನನಗೇನು ಗೊತ್ತಿತ್ತು ಹೀಗೊಂದು ಕೇಸು ಬರುತ್ತೆ ಅಂತ? ನಾನೂ ರಾಜಿ ಮಾಡಿಕೊಳ್ಳೋಣ ಅಂತ ಅವನನ್ನ ಭೇಟಿ ಮಾಡಕ್ಕೆ ಪ್ರಯತ್ನಿಸಿದೆ. ಆದರೆ ಪಾರ್ಟಿ ಭೇಟಿ ಆಗಕ್ಕೆ ಒಪ್ಪಲೇ ಇಲ್ಲ."

"ರಾಜಿ ಮಾಡಿಕೊಳ್ಳೋದೆ? ಆಗೋದೇ ಇಲ್ಲ. ಅಲ್ಲಣ್ಣ. ನಾವ್ಯಾಕೆ ರಾಜಿ ಮಾಡಿಕೊಳ್ಳಬೇಕು? ಅವನು ಹೇಳಿದ್ದು ಸತ್ಯವಾ? ಅಲ್ಲವಲ್ಲ? ಒಂದು ವೇಳೆ ಸತ್ಯವಾಗಿದ್ದಿದ್ದರೆ ಅಮ್ಮಅಪ್ಪನ ಮಧ್ಯೆ ಒಂದು ಬಾರಿಯಾದರೂ ಮನಸ್ತಾಪ ಆಗಿರ್ತಿತ್ತು. ಅಂತದ್ದು ನಾವು ಎಂದೂ ಕಂಡಿಲ್ಲ. ಇವನು ಹೇಳೋದು ಸತ್ಯ ಅಂತ ಹೇಗೆ ನಂಬೋದು?"

ಪ್ಯಾಂಟಿಗೆ ಅಂಟಿದ್ದ ಅರಳೀಕಟ್ಟೆಯ ದೂಳನ್ನು ಒರೆಸುತ್ತ ಅನೀಶ ತನ್ನ ಸಂದೇಹವನ್ನು ಮುಂದಿಟ್ಟ. "ಅಪ್ಪ ಎಂಥವರು. ಅವರ ಹೆಸರಿಗೆ ಮಸಿ ಬಳಿಯೋದಿಕ್ಕೆ ಹೋಗುತ್ತಿದ್ದಾನಲ್ಲ? ಇವನನ್ನು ಸುಮ್ಮನೆ ಬಿಡಬಾರದು."

ಅವನ ಮಾತಿಗೆ ಒಪ್ಪಿಗೆಯೇನೋ ಎನ್ನುವಂತೆ ಅವರು ಕುಳಿತಿದ್ದ ಕಟ್ಟೆಯ ಮೇಲಿನ ಆಲದಮರ ಜೋರಾಗಿ ಅಲ್ಲಾಡಿತು. ಬಿಸಿಲಿಗೆ ಒಣಗಿದ್ದ ಎಲೆಗಳು ತಮ್ಮ ಮೇಲೆ ಎದುರಿನ ರಸ್ತೆಯಲ್ಲಿ ಓಡಾಡಿದ್ದ ಬಸ್ಸು, ಕಾರು, ಗಣಿ ಲಾರಿಗಳು ಹಾರಿಸಿದ್ದ ಕೆಂದೂಳಿನ ಸಮೇತ ಅವರಿಬ್ಬರ ಮೇಲೂ ಉದುರಿದುವು. ದೂಳಿನಿಂದಲೋ ಏನೋ ಸತೀಶ ಕೆಮ್ಮಿದ. ಅನೀಶನಿಗೆ ಇದು ತನ್ನ ಮಾತಿಗೆ ಉತ್ತರ ನೀಡದ್ದಕ್ಕೆ ಕಾರಣ ಎನ್ನಿಸಿತು.

"ಅಪ್ಪ ಇದ್ದಾಗಲೇ ಅವರ ಹೆಸರು ಕೆಡಿಸಬಹುದಿತ್ತು. ಅಪ್ಪನ ವರ್ಚಸ್ಸಿನ ಮುಂದೆ ಅದು ನಡೆಯೋಲ್ಲ ಅಂತ ಸುಮ್ಮನಿದ್ದಿರಬೇಕು. ಈಗ ಕಾಲ ಎಲ್ಲವನ್ನೂ ಮರೆಸಿದೆ. ಅಪ್ಪನಿಗೆ ಹೆಸರಿದೆ. ಖ್ಯಾತಿ ಇದೆ. ಆದರೆ ಅಧಿಕಾರ ಇಲ್ಲ. ಪ್ರತಿಷ್ಠೆ ಇಲ್ಲ. ಈಗ ತಡೆಯಲು ನಮ್ಮಿಬ್ಬರನ್ನು ಬಿಟ್ಟು ಬೇರೆ ಯಾರೂ ಇಲ್ಲವಲ್ಲ!" ತಮಗೊದಗಿ ಬಂದ ಸಮಸ್ಯೆಗೆ ಕಾರಣವನ್ನು ತನ್ನಷ್ಟಕ್ಕೆ ಕೊಟ್ಟು ಮರೆಯಲು ಯತ್ನಿಸಿದ ಸತೀಶ.